ಲಲಿತ ಮಂಟಪ

# ಕಲಾವಿದ ಗೆರೆಗಳನ್ನು ಮೀರಿ ನಡೆಯುವುದನ್ನು ಕಲಿಬೇಕು

## ಸೂಫಿ ಕಥಕ್ ನೃತ್ಯಕಲಾವಿದೆ ಮಂಜರಿ ಚತುರ್ವೇದಿ ಸಂದರ್ಶನ

ಕೋಡಿಬೆಟ್ಟು ರಾಜಲಕ್ಷ್ಮಿ

ಭಾರತೀಯ ಶಾಸ್ತ್ರೀಯ ನೃತ್ಯ ಕ್ಷೇತ್ರದಲ್ಲಿ ಗಮನಾರ್ಹ ಹೆಸರು ಮಂಜರಿ ಚತುರ್ವೇದಿ. ಲಖ್ನೋ ಘರಾನಾ ಕಥಕ್ ನೃತ್ಯ ಕಲಿತು, ಸೂಫಿ ಸಂಗೀತದಿಂದ ಆಕರ್ಷಿತರಾಗಿ 'ಸೂಫಿ ಕಥಕ್' ಎಂಬ ಹೊಸ ಪರಿಕಲ್ಪನೆಯನ್ನು ಹುಟ್ಟುಹಾಕಿದವರು. ಕಳೆದ 25 ವರ್ಷಗಳಿಂದ ದೇಶ ವಿದೇಶಗಳಲ್ಲಿ ನೃತ್ಯ ಪ್ರಸ್ತುತಿಯನ್ನು ನೀಡುತ್ತಿದ್ದಾರೆ. ಸಗುಣ ಭಕ್ತಿ ಪರಂಪರೆಯ ನೃತ್ಯ ಪ್ರಕಾರಗಳು ಉತ್ತುಂಗದಲ್ಲಿರುವ ಸಂದರ್ಭದಲ್ಲಿ ಸೂಫಿ ಸಂಗೀತವನ್ನು ಕಲಿತು, ಅದರ ಆಧಾರದಲ್ಲಿಯೇ ನಿರ್ಗುಣ ಭಕ್ತಿ ಪರಂಪರೆಯನ್ನು ನೃತ್ಯದ ಮೂಲಕ ಮುನ್ನೆಲೆಗೆ ತರಲು ಶ್ರಮಿಸಿದರು. ಸಾಂಪ್ರದಾಯಿಕ ಕಥಕ್ ನೃತ್ಯವನ್ನು ಕಲಿತು ಬಳಿಕ ತಮ್ಮದೇ ಆದ ಹೊಸ ಹಾದಿಯನ್ನು ಕಂಡುಕೊಂಡ ಮಂಜರಿ ಅವರು, ನೃತ್ಯಪರಂಪರೆಯನ್ನು ಬಹುಕಾಲದಿಂದ ಮುಂದುವರೆಸಿಕೊಂಡು ಬಂದ ರಾಜಾಶ್ರಯದ ನರ್ತಕಿಯರ ಕುರಿತು ಸಾಂಸ್ಕೃತಿಕ ಇತಿಹಾಸದಲ್ಲಿ ಯಾವುದೇ ಉಲ್ಲೇಖ ಇಲ್ಲ ಎಂಬುದನ್ನು ಗುರುತಿಸಿದರು. ಪುರುಷ ಕಲಾವಿದರು ತಮ್ಮ ಮನೆತನದ ಹೆಸರನ್ನು ಹೆಮ್ಮೆಯಿಂದ ಹೇಳಿಕೊಳ್ಳುವ ಅವಕಾಶ ಇರುವ ಈ ಸಮಾಜದಲ್ಲಿ ಕಥಕ್ ನೃತ್ಯವನ್ನು ತಲೆಮಾರಿನಿಂದ ತಲೆಮಾರಿಗೆ ಹೊತ್ತು ತಂದ ಕಲಾವಿದೆಯರು ತಮ್ಮ ಹಿನ್ನೆಲೆಯನ್ನು ಹೇಳಿಕೊಳ್ಳಲು ಮುಜುಗರ ಪಡುವ ಸನ್ನಿವೇಶ ಯಾಕೆ ಇರಬೇಕು ಎಂದು ಪ್ರಶ್ನಿಸಿದರು. ಈ ಹಿನ್ನೆಲೆಯಲ್ಲಿ ತಮ್ಮ ಅಧ್ಯಯನವನ್ನು ಕೈಗೆತ್ತಿಕೊಂಡು ಹೊಸ ಹೊಸ ರೀತಿಯ ನೃತ್ಯ ಪ್ರಸ್ತುತಿಯನ್ನು ದೇಶ ವಿದೇಶಗಳಲ್ಲಿ ನೀಡಿದರು. ಕೊನೆಯ ತಲೆಮಾರಿನ ರಾಜನರ್ತಕಿಯನ್ನು ಭೇಟಿಯಾಗಿ ಅವರಿಂದ ಮಾಹಿತಿ ಸಂಗ್ರಹಿಸಿ ತಮ್ಮ ಅಧ್ಯಯನಕ್ಕೆ ಹೆಚ್ಚಿನ ಪುಷ್ಟಿ ತುಂಬಿದರು. ರಾಜನರ್ತಕಿಯರ ಅಧ್ಯಯನ ಶ್ರಮ, ಅಭ್ಯಾಸ ಶ್ರಮವನ್ನು ಗೌರವದಿಂದ ಕಾಣಬೇಕು ಎಂದು ನಿರಂತರವಾಗಿ ಪ್ರತಿಪಾದಿಸುತ್ತ ಬಂದಿರುವ ಮಂಜರಿ ಚತುರ್ವೇದಿ ಅವರಿಗೆ ನೃತ್ಯವೆನ್ನುವುದು ಸಾಂಸ್ಕೃತಿಕ ಚಳವಳಿಗೆ ಒದಗಿದ ಒಂದು ಮಾಧ್ಯಮವಾಗಿದೆ. ಅವರೊಡನೆ 'ಮಯೂರ' ಪತ್ರಿಕೆಗಾಗಿ ನಡೆಸಿದ ಮಾತುಕತೆಯ ಬರಹ ರೂಪ ಇಲ್ಲಿದೆ.